ಸಾಕ್ಷಿಯನ್ನು ದಿನಾಂಕ 16-06-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ-**

1 ನೇ ಪ್ರತಿವಾದಿ ಯಲ್ಲವ್ವ ನನ್ನ ತಂದೆಯ ಅಕ್ಕ ಎಂದರೆ ನಿಜ. ಆಕೆಯ ಗಂಡನ ಹೆಸರು ಮಹಾದೇವಪ್ಪ. ಆಕೆಯ ಗಂಡನ ಮನೆ ನೂಲ್ವಿಯಲ್ಲಿದೆ. ಮಲ್ಲವ್ವ ರವರು ನನ್ನ ಅಜ್ಜ ಬಸವಣ್ಣೆಪ್ಪರವರ ತಾಯಿ. ಆಕೆಯ ತವರುಮನೆ ನೂಲ್ವಿಯಲ್ಲಿರುವುದು ಎಂದರೆ ನಿಜ. ಮಲ್ಲಪ್ಪ ಬಸಪ್ಪ ಶಿವನಮನಿ ರವರು ಸದರಿ ಮಲ್ಲವ್ವರವರ ಅಣ್ಣ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ ಮಹಾದೇವಪ್ಪರವರು ಸದರಿ ಮಲ್ಲಪ್ಪ ಬಸಪ್ಪ ಶಿವನಮನಿ ರವರ ಮಗ ಎಂದರೆ ಗೊತ್ತಿಲ್ಲ. ನನ್ನ ಅಜ್ಜ ಹನುಮಂತಪ್ಪ ಗೋರಕ್ಕನವರಿಗೆ ಯಾವುದೇ ಪಿತಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಮಲ್ಲಪ್ಪ ಬಸಪ್ಪ ಶಿವನಮನಿ ರವರು ನನ್ನ ಅಜ್ಜನಿಗೆ 2 ಎಕರೆ 25 ಗಂಟೆಯನ್ನು ಭಕ್ಷಿಸ ಮಾಡಿದ್ದರ ಎಂದರೆ ಸರಿಯಲ್ಲ. ಆ ಭಕ್ಷೀಸ ಪತ್ರ ನೊಂದ ಆಗಿದೆ ಎಂದರೆ ಸರಿಯಲ್ಲ. ವಿಚಾರ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ, ಹುಬ್ಬಳ್ಳಿ.